ಭಾರತೀಯ ಜನತಾ ಪಾರ್ಟಿ

(ಕೇಂದ್ರ ಕಚೇರಿ)

11, ಅಶೋಕ ರಸ್ತೆ, ನವದೆಹಲಿ-110001

ದಿನಾಂಕ: ಮಾರ್ಚ್ 15, 2013

## ಗಡಿಯಾಚೆ ಭಯೋತ್ಪಾದನೆ ಕುರಿತು ಭಾಜಪ ರಾಷ್ಟ್ರೀಯ ಅಧ್ಯಕ್ಷ ಶ್ರೀ ರಾಜನಾಥ್ ಸಿಂಗ್ ಹೇಳಿಕೆ

ಅಫ್‌ಜಲ್ ಗುರು ನೇಣಿನ ಶಿಕ್ಷೆಯನ್ನು ಖಂಡಿಸಿ ಪಾಕಿಸ್ತಾನ ಸಂಸತ್ತು ತೆಗೆದುಕೊಂಡ ನಿರ್ಣಯದಿಂದ ಭಾರತದ ಆಂತರಿಕ ವಿಚಾರದಲ್ಲಿ ಹಸ್ತಕ್ಷೇಪ ಮಾಡಲಾಗಿದ್ದು, ಭಾರತೀಯ ಜನತಾ ಪಾರ್ಟಿ(ಭಾಜಪ) ಇದನ್ನು ಬಲವಾಗಿ ಖಂಡಿಸುತ್ತದೆ. ಭಾರತದ ವಿಚಾರದಲ್ಲಿ ಪಾಕಿಸ್ತಾನ ಎಲ್ಲಾ ರೀತಿಯಿಂದಲೂ ರಾಜತಾಂತ್ರಿಕ ಮಿತಿ ಮೀರಿದೆ. ಭಾರತದಲ್ಲಿ ನಡೆಯುತ್ತಿರುವ ಸರಿಸುಮಾರು ಎಲ್ಲಾ ಭಯೋತ್ಪಾದನಾ ಕೃತ್ಯಗಳಿಗೆ ಪಾಕಿಸ್ತಾನ ಕುಮಕ್ಕು ನೀಡುತ್ತಿದ್ದು, ಅಫಜಲ್ ಗುರು ನೇಣಿನ ಶಿಕ್ಷೆ ಕುರಿತು ರಾಷ್ಟ್ರೀಯ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸುವ ಮೂಲಕ, ಅದು ಭಯೋತ್ಪಾದನಾ ಗುಂಪುಗಳೊಂದಿಗೆ ಸಂಪರ್ಕ ಹೊಂದಿರುವ ಸಮ್ಮತಿಯ ಮುದ್ರೆ ಒತ್ತಿದೆ.

ಸೋಜಿಗದ ಸಂಗತಿಯೆಂದರೆ, ಕೇಂದ್ರದಲ್ಲಿರುವ ನಮ್ಮ ಸರ್ಕಾರ ಭಯೋತ್ಪಾದಕರ ವಿರುದ್ಧದ ಹೋರಾಟಕ್ಕೆ ಬೇಕಾದ ಕಾರ್ಯಯೋಜನೆ ಅಥವಾ ದೃಢ ನಿಶ್ಚಯವನ್ನು ಹೊಂದಿಲ್ಲ. ಪಾಕಿಸ್ತಾನದಲ್ಲಿ ಅಡಗಿರುವ ಭಯೋತ್ಪಾದಕರ ವಿರುದ್ಧ ಕಾರ್ಯಪ್ರವೃತ್ತರಾದರೆ ಭಾಜಪ ಅದಕ್ಕೆ ತನ್ನ ಸಂಪೂರ್ಣ ಬೆಂಬಲ ನೀಡುವ ಭರವಸೆ ನೀಡಿದ್ದರೂ, ನಮಗೆ ಮತ್ತು ಈ ದೇಶದ ಜನರಿಗೆ ನಿರಾಶೆ ಮೂಡಿಸಿದೆ. ದೇಶವನ್ನು ಭಯೋತ್ಪಾಕರಿಂದ ರಕ್ಷಿಸುವತ್ತ ಲಕ್ಷ್ಯ ನೀಡುವ ಬದಲು ಯುಪಿಎ ಸರ್ಕಾರ ತನ್ನ ಎಲ್ಲಾ ಶಕ್ತಿಯನ್ನು ಭಾಜಪ ವಿರುದ್ಧ ಬಳಸುತ್ತಿದೆ.

**ಭಾರತೀಯ ಸೈನಿಕರ ಶಿರಚ್ಛೇದನ, ಹೈದರಾಬಾದಿನಲ್ಲಿ ಸ್ಫೋಟ ಹಾಗೂ ಶ್ರೀನಗರದಲ್ಲಿ ಸಿಆರ್‌ಪಿಎಫ್ ಶಿಬಿರದ ಮೇಲೆ ಧಾಳಿ, ಹೀಗೆ ಸರಣಿ ಘಟನೆಗಳು ನಡೆಯುತ್ತಿದ್ದು, ಗಡಿಯಾಚೆಗಿನ ಭಯೋತ್ಪಾದನೆಯನ್ನು ಮಟ್ಟ ಹಾಕಲು ಯುಪಿಎ ಸರ್ಕಾರ ಅಸಾಮರ್ಥ್ಯವಾಗಿರುವ ಅಂಶ ದೃಢಪಟ್ಟಿದೆ.** ಭಯೋತ್ಪಾದಕರಿಂದ ನಮ್ಮ ನಗರಗಳು ಮತ್ತು ಜನರನ್ನು ರಕ್ಷಿಸಲು ಯುಪಿಎ ಸರ್ಕಾರ ಯಾವುದೇ ಬಲವಾದ ಕ್ರಮ ತೆಗೆದುಕೊಂಡಿಲ್ಲ.

ಶ್ರೀನಗರದಲ್ಲಿ ಫಿದಾಯೀನ್ ಧಾಳಿ ನಡೆದ ಹಿನ್ನಲೆಯಲ್ಲಿ ಪಾಕಿಸ್ತಾನದೊಂದಿಗೆ ರಾಜತಾಂತ್ರಿಕ ಸಂಬಂಧವನ್ನು ಭಾರತ ತಕ್ಷಣ ಕಡಿಮೆಗೊಳಿಸಬೇಕು ಎಂದು ಭಾಜಪ ಆಗ್ರಹಿಸುತ್ತದೆ. ತಮ್ಮ ನೆಲೆಯಲ್ಲಿ ಯಾವುದೇ ಭಯೊತ್ಪಾದನಾ ಚಟುವಟಿಕೆಗಳಿಗೆ ಆಸ್ಪದ ನೀಡುವುದಿಲ್ಲವೆಂದು ಜನವರಿ 2004ರಲ್ಲಿ ಪಾಕಿಸ್ತಾನ ಮಾಡಿಕೊಂಡ ಒಪ್ಪಂದದಂತೆ ನಡೆಯುವವರೆಗೂ, ಕೇಂದ್ರ ಸರ್ಕಾರ ನಡೆಸುತ್ತಿರುವ ಎಲ್ಲಾ ರೀತಿಯ ವಿಶ್ವಾಸ ವೃದ್ಧಿ ಕ್ರಮಗಳನ್ನು(ಸಿಬಿಎಂ) ಸದ್ಯದ ಮಟ್ಟಿಗೆ ಕೈಬಿಡಬೇಕು.

**ಪಾಕಿಸ್ತಾನ ಭಯೋತ್ಪಾದಕರಿಗೆ ನೀಡುತ್ತಿರುವ ಬೆಂಬಲ ನಿಲ್ಲಿಸದೆ ಇದ್ದರೆ, ಭಾರತ ಇಸ್ಲಾಮಾಬಾದಿನಲ್ಲಿರುವ ನಮ್ಮ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು. ಪಾಕಿಸ್ತಾನದೊಂದಿಗೆ ನಯವಾಗಿ ವರ್ತಿಸುವ ನೀತಿ ಅನುಸರಿಸುವ ಯುಪಿಎ ಸರ್ಕಾರ, ಭಯೋತ್ಪಾದಕರು ಮತ್ತು ಭಾರತ ವಿರೋಧಿ ಶಕ್ತಿಗಳಿಗೆ ಸದರ ನೀಡಿದಂತಾಗಿದೆ. ಭಯೋತ್ಪಾದಕರು ಪುನರ್ ಸಂಘಟಿತರಾಗಿದ್ದು, 2014ರಲ್ಲಿ ಅಫಘಾನಿಸ್ತಾನದಿಂದ ನ್ಯಾಟೊ ಪಡೆಗಳು ನಿರ್ಗಮಿಸಿದ ನಂತರ ಪರಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ.**

ಈ ಪ್ರದೇಶದಲ್ಲಿ ಶಾಂತಿ ಕಾಪಾಡಬೇಕಿದ್ದರೆ, ಉಲ್ಬಣಿಸುತ್ತಿರುವ ಹೊಸ ಸವಾಲುಗಳನ್ನು ಸಕ್ಷಮವಾಗಿ ಎದುರಿಸಬಲ್ಲ ಸೇನೆ ಆವಶ್ಯಕ. **ಭಾರತೀಯ ಸಶಸ್ತ್ರಪಡೆಗಳ ಸಂಖ್ಯೆ ಹೆಚ್ಚಿಸಿ ಅದರ ಆಧುನೀಕರಣಕ್ಕೆ ತ್ವರಿತ ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ, ಬಲವರ್ಧನೆಯ ಕುರಿತು ಯುಪಿಎ ಸರ್ಕಾರ ತಕ್ಷಣ ಗಮನ ಹರಿಸಬೇಕು. ದೀರ್ಘಾವಧಿಯ ಶಾಂತಿಯನ್ನು ಬಲಿಷ್ಠ ರಾಷ್ಟ್ರ ಸಾಧಿಸಬಹುದೇ ಹೊರತು ದುರ್ಬಲ ರಾಷ್ಟ್ರಕ್ಕೆ ಸಾಧ್ಯವಿಲ್ಲ.**

ಪಾಕಿಸ್ತಾನ ಸಂಸತ್ ಅಂಗೀಕರಿಸಿದ ನಿರ್ಣಯದ ಹಿನ್ನಲೆಯಲ್ಲಿ, ಅದರ ಈ ಕ್ರಮವನ್ನು ಭಾರತೀಯ ಸಂಸತ್ ಸರ್ವಾನುಮತದಿಂದ ಖಂಡಿಸಬೇಕು ಹಾಗೂ ಆತಂಕವಾದದ ವಿರುದ್ಧ ನಿರ್ಣಾಯಕ ಹೋರಾಟ ನಡೆಸುವ ನಮ್ಮ ಸಂಕಲ್ಪವನ್ನು ಪುನರುಚ್ಚರಿಸಬೇಕು ಎಂದು ಭಾಜಪ ಸರ್ಕಾರವನ್ನು ಕೋರುತ್ತದೆ. ಈ ಕುರಿತ ನಿಳುವಳಿಯನ್ನು ಪ್ರಧಾನ ಮಂತ್ರಿಗಳೇ ಮಂಡಿಸಬೇಕು.

ಪಾಕಿಸ್ತಾನ ತನ್ನ ಕುಚೋದ್ಯಗಳನ್ನು ನಿಲ್ಲಿಸುವಂತೆ ಒತ್ತಡ ಹೇರುವ ಮೂಲಕ, ಭಯೋತ್ಪಾದನೆ ವಿರುದ್ಧ ಕಠಿಣ ನಿಲುವನ್ನು ಸರ್ಕಾರ ಹೊಂದುವ ಸಮಯ ಇದಾಗಿದೆ. ರಾಜತಾಂತ್ರಿಕ ಕೌಶಲ್ಯವನ್ನು ಪ್ರದರ್ಶಿಸುವಲ್ಲಿ ಯುಪಿಎ ವಿಫಲವಾದರೆ, ಪಾಕಿಸ್ತಾನ ಪ್ರಚೋದಿತ ಭಯೋತ್ಪಾದಕರ ಭಾರತ ವಿರುದ್ಧದ ಘಾತಕ ಧಾಳಿ ಮತ್ತಷ್ಟು ಹೆಚ್ಚಲಿದೆ.

(ಓ.ಪಿ.ಕ್ಹೊಲಿ)<br>ಮುಖ್ಯ ಕಚೇರಿ ಪ್ರಭಾರಿ